
ಅಂಗಡಿಯ ಹತ್ತಿರ ಬಂದದ್ದೇ ಮನ್ಸೂರ್ ತನ್ನ ಮಾತು ನಿಲ್ಲಿಸಿದವನು ಆ ಮಬ್ಬು ಬೆಳಕಿನಲ್ಲಿ ಅವಳ ಗುರುತು ಹಚ್ಚಲು ಕಣ್ಣು ಕಿರಿದುಮಾಡಿಕೊಂಡು ನೋಡತೊಡಗಿದ.

"ಶೂ ಪಾಲಿಷ್ ಇದೆಯಾ, ಕಪ್ಪು ಬಣ್ಣದ್ದು?" ಎಂದು ಕೇಳಿದಳು ಹುಡುಗಿ.

"ಇದೆ" ಎಂದ ಹಮೀದ್. ತನ್ನ ದನಿ ಸರಿಯಾಗಿ ಹೊರಡಲಿಲ್ಲವೆಂದು ಅನ್ನಿಸಿತೋ ಏನೋ, ಗಂಟಲು ಸರಿಮಾಡಿಕೊಂಡು ಇದೆ ಎಂದು ಮತ್ತೊಮ್ಮೆ ಹೇಳಿದ. ಹುಡುಗಿ ಮುಗುಳುನಕ್ಕಳು.

"ಬಾ ಬಂಗಾರೀ, ಹ್ಯಾಗಿದೀಯ ಇವತ್ತು?" ಎಂದ ಮನ್ಸೂರ್. ಅವನದು ಬಾಯಲ್ಲೇನೋ ಹೊರಳಾಡಿದಂಥ ಉಚ್ಚಾರಣೆ. ಹಮೀದ್ ಇವನೇನು ಒಂದು ಜೋಕು ಮಾಡಿದನಾ ಎಂದು ಯೋಚಿಸಿದ. "ಎಷ್ಟು ಘಂ ಅಂತಿದೀಯ ಸಿಂಗಾರಿ, ಯಾವ ಸೆಂಟು ಬಳಕೊಂಡಿದೀಯಾ? ಒಳ್ಳೆ ಹಕ್ಕಿ ಕೂಗಿದ ಹಾಗೆ ಮಾತು, ಚಿಗರೆಯ ಹಾಗೆ ಮೈಯಿ. ಇವತ್ತು ರಾತ್ರಿ ಎಷ್ಟು ಹೊತ್ತಿಗೆ ಬಿಡುವಾಗಿರ್ತೀಯಾ ಚಿನ್ನಾ. ನನ್ನ ಬೆನ್ನು ತಿಕ್ಕೋರೊಬ್ರು ಬೇಕು."

ಹುಡುಗಿ ಅವನನ್ನು ಕಡೆಗಣಿಸಿದಳು. ಇಬ್ಬರಿಗೂ ಬೆನ್ನು ಹಾಕಿ ನಿಂತುಕೊಂಡಿದ್ದ ಹಮೀದನಿಗೆ ಮನ್ಸೂರ್ ರಾತ್ರಿ ಬರುವಂತೆ ಆ ಹುಡುಗಿಯನ್ನು ಪುಸಲಾಯಿಸುತ್ತಿದ್ದುದು ಕೇಳಿಸುತ್ತಿತ್ತು. ಆಗ ಉಂಟಾದ ಗೊಂದಲದಿಂದಾಗಿ ಅವನಿಗೆ ಕೂಡಲೇ ಪಾಲೀಷಿನ ಡಬ್ಬಿ ಸಿಕ್ಕಲಿಲ್ಲ. ಕೊನೆಗೂ ಅದು ಸಿಕ್ಕಿದ್ದೇ ಹುಡುಗಿ ಉದ್ದಕ್ಕೂ ತನ್ನನ್ನು ಗಮನಿಸಿದಂತೆ, ತನ್ನ ಮುಖ ಕೆಂಪಾದುದನ್ನು ನೋಡಿ ಮುದಗೊಂಡಂತೆ ಅನ್ನಿಸಿತು. ಅವನು ನಕ್ಕ. ಆದರೆ, ಆಕೆ ಹುಬ್ಬುಗಂಟಿಕ್ಕಿಕೊಂಡು ದುಡ್ಡು ಕೊಟ್ಟಳು. ಮನ್ಸೂರ್ ಅವಳ ಪಕ್ಕದಲ್ಲೇ ಮಾತಾಡುತ್ತಾ, ಅವಳನ್ನು



## ಅಬ್ದುಲ್‌ರಜಾಕ್ ಗುರ್ನಾ

ಈ ವರ್ಷ ನೊಬೆಲ್ ಪ್ರಶಸ್ತಿ ಪಡೆದಿರುವ ಲೇಖಕ ಅಬ್ದುಲ್‌ರಜಾಕ್ ಗುರ್ನಾ. 1948ರಲ್ಲಿ ತಾಂಝಾನಿಯಾದಲ್ಲಿ ಹುಟ್ಟಿದವನು. ಈತ ತನ್ನ ಹದಿನೆಂಟನೆಯ ವಯಸ್ಸಿನಲ್ಲಿ ಒಬ್ಬ ನಿರಾಶ್ರಿತನಾಗಿ ಯುನೈಟೆಡ್ ಕಿಂಗ್ಡಮ್‌ಗೆ ಹೋದವನು. ಮುಂದೆ ಕ್ಯಾಂಟರ್‌ಬರಿಯ ಕ್ರೈಸ್ಟ್ ಕಾಲೇಜಿನಲ್ಲಿ ಅಧ್ಯಯನ ಮಾಡಿ ಲಂಡನ್ ವಿಶ್ವವಿದ್ಯಾಲಯದ ಪದವೀಧರನಾದ. ಸದ್ಯ ಕೆಂಟ್ ವಿಶ್ವವಿದ್ಯಾಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕ. 'ಮೆಮೊರಿ ಆಫ್ ಡಿಪಾರ್ಚರ್', 'ಅಡ್ಮೈರಿಂಗ್ ಸೈಲೆನ್ಸ್', 'ಪ್ಯಾರಡೈಸ್', 'ಬೈ ದಿ ಸೀ', 'ಡೆಸರ್ಷನ್', 'ದಿ ಲಾಸ್ಟ್ ಗಿಫ್ಟ್' ಇವನ ಮುಖ್ಯ ಕಾದಂಬರಿಗಳು. ವಸಾಹತುಶಾಹಿಯ ಪರಿಣಾಮಗಳನ್ನು ತೀರ ಆಳವಾಗಿ ಪರಿಶೋಧಿಸುವ ಈತನ ಕೃತಿಗಳಲ್ಲಿ ಎರಡು ಖಂಡಗಳ ಹಾಗೂ ಎರಡು ಸಂಸ್ಕೃತಿಗಳ ನಡುವೆ ಬದುಕಬೇಕಾದ ನಿರಾಶ್ರಿತರ ತವಕ ತಲ್ಲಣಗಳ ಉಜ್ವಲ ಚಿತ್ರವಿದೆ.